<u>1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ</u>

<u>Spl.C.92/2020</u>

ದಿಃ 12.02.2021
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Cw-2 Pw-2

| | | |
|---|---|---|
| ಹೆಸರು | ಃ | ಮಹಿಮಾಮಾಲ |
| ಗಂಡನ ಹೆಸರು | ಃ | ರವಿಕುಮಾರ್ |
| ವಯಸ್ಸು | ಃ | 31 ವರ್ಷ |
| ಉದ್ಯೋಗ | ಃ | ಗೃಹಿಣಿ |
| ವಾಸಸ್ಥಳ | ಃ | ಆನಂದಪುರ,<br>ಚನ್ನಪಟ್ಟಣ |

<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>

ಚಾಸಾ.1 ನನ್ನ ಪತಿ. ಚಾಸಾ.3ರಿಂದ 9ರವರು ನನಗೆ ಗೊತ್ತು. ಆರೋಪಿಗಳು ಗೊತ್ತು. ದಿಃ25.02.2020ರಂದು ಸಂತೆಮೊಗೇನಹಳ್ಳಿಯ ಅಕ್ಕೂರು ರಸ್ತೆಯಲ್ಲಿ ನಮ್ಮ 15 ಗುಂಟೆ ಜಮೀನು ಇದ್ದು, ನಾವು ಚಾಸಾ.1, 3ರಿಂದ 9ರವರು ಅದರ ಹದ್ದುಬಸ್ತಿಗಾಗಿ ಕಲ್ಲುಗಳನ್ನು ನೆಟ್ಟು ಸಂಜೆ 7.00 ಗಂಟೆಗೆ 1ನೇ ಆರೋಪಿ ಬಂದು ನಮ್ಮನ್ನು ಕೆಟ್ಟಕೆಟ್ಟದಾಗಿ ಹೊಲೆಯರು, ನೀವು ಈ ಜಮೀನಿಗೆ ಬರಲು ಯಾರು ಅಧಿಕಾರ ಕೊಟ್ಟವರು, ಸೂಳೇರು ಎಂದು ಬೈದರು. 1ನೇ ಆರೋಪಿಯ ಜೊತೆಗೆ 2, 3 ಮತ್ತು ಸುಮಾರು 15

ಇತರೆ ಜನರು ಇದ್ದರು. 1ನೇ ಆರೋಪಿಯನ್ನು ನನ್ನ ಪತಿ ನೀನು ಯಾರು ಎಂದು ಕೇಳಿದಾಗ ಆತ ನಾನು ಗ್ರಾಮ ಪಂಚಾಯ್ತಿ ಅಧ್ಯಕ್ಷ ಎಂದು ಹೇಳಿದರು. 1ನೇ ಆರೋಪಿ ನನ್ನ ಪತಿ ಚಾಸಾ.1ರವರಿಗೆ ನೂಕಿಕೊಂಡು ಕೈಯ್ಯಿಂದ ಹಲ್ಲೆ ಮಾಡಲು ಮುಂದಾದಾಗ ಚಾಸಾ.4ರವರು ಮಧ್ಯ ಬಂದಿದ್ದು, 1ನೇ ಆರೋಪಿ ಅವರಿಗೆ ಕೈಯ್ಯಿಂದ ಕುತ್ತಿಗೆಯ ಮೇಲೆ ಹೊಡೆದರು. ಆಗ ಚಾಸಾ.3ರವರು ಮಧ್ಯ ಪ್ರವೇಶ ಮಾಡಿದ್ದು ಅವರನ್ನು 1ನೇ ಆರೋಪಿ ತಳ್ಳಾಡಿ, ಬಟ್ಟೆಗಳನ್ನು ಎಳೆದರು ಆಗ ಅವರು ನೆಲದ ಮೇಲೆ ಬಿದ್ದರು. ಆಗ ನಾನು ಚಾಸಾ.3ರವರ ಸಹಾಯಕ್ಕೆ ಹೋದೆ. ಆಗ ನನ್ನನ್ನು 2ನೇ ಆರೋಪಿ ತಳ್ಳಿದರು. 1ನೇ ಆರೋಪಿ ಚಾಸಾ.3ರವರಿಗೆ ಹೊಲೆಯರು, ಎಸ್.ಸಿ., ಎಸ್.ಟಿ.ಗಳು, ಕೀಳು ಜಾತಿಯವರು, ನೀವು ಸ್ಥಳಕ್ಕೆ ಬಂದರೆ ನಿಮ್ಮನ್ನು ಹುಟ್ಟಲಿಲ್ಲ ಎನ್ನಿಸಿಬಿಡುತ್ತೇವೆ ಎಂದು ನಾವು ನಮ್ಮ ಜಮೀನಿನಲ್ಲಿ ಯಾವುದೇ ಕಟ್ಟಡ, ಚರ್ಚ್, ವ್ಯವಸಾಯ ಮಾಡಲು ಬಿಡುವುದಿಲ್ಲ, ಬಾರ್ ಕ್ಲಬ್ ಬೇಕಾದರೆ ಕಟ್ಟಿ ಎಂದು ಹೇಳಿದರು. 2ನೇ ಆರೋಪಿ ನನ್ನ ಮೇಲೂ ಸಹ ಅವಾಚ್ಯ ಶಬ್ದದಿಂದ ನಿಂದಿಸಿದರು. 1ರಿಂದ 3ನೇ ಆರೋಪಿಗಳು ಮತ್ತು ಅವರೊಂದಿಗಿದ್ದ ಇತರೆ ಜನಗಳು ನಮ್ಮನ್ನು ಸಾಯಿಸುತ್ತೇವೆಂದು ಜೀವ ಬೆದರಿಕೆ

ಹಾಕಿದರು. ಆ ಸಮಯದಲ್ಲಿ ಚಾಸಾ.5 ರಿಂದ 8 ರವರು ಸ್ಥಳದಲ್ಲಿದ್ದು, ಇತರೆ ಸ್ಥಳದಲ್ಲಿದ್ದ ಜನರು ನಮ್ಮ ಸಹಾಯಕ್ಕೆ ಬಂದರು. ನಂತರ ನಾವು ಮನೆಗೆ ಹಿಂದಿರುಗಿದೆವು. ಆರೋಪಿಗಳು ಎಲ್ಲಾರೂ ಮದ್ಯಪಾನ ಮಾಡಿದ್ದರು. ಮಾರನೇ ದಿನ ನಾವು ಬೆಳಿಗ್ಗೆ 9.00 ಗಂಟೆಗೆ ಯಾರೋ ಜನರು ನಮಗೆ ಫೋನ್ ಮಾಡಿ, ನಮ್ಮ ಜಮೀನಿನಲ್ಲಿ ಕಲ್ಲುಗಳಿಲ್ಲ ಎಂದು ಹೇಳಿದರು. ಅಲ್ಲಿದ್ದ ಕಲ್ಲುಗಳನ್ನು ಹಿಂದಿನ ದಿನ ಗಲಾಟೆ ಮಾಡಿದ ಆರೋಪಿಗಳೇ ಕಿತ್ತು ಹಾಕಿರುತ್ತಾರೆ. ಅದಕ್ಕೆ ಸಂಬಂಧಪಟ್ಟಂತೆ ಘಟನೆಗೆ ಮುನ್ನ ತೆಗೆದಿದ್ದ ಭಾವಚಿತ್ರ ನಿ.ಪಿ.3 ರಂತೆ ಇದ್ದು, ಘಟನೆಯ ನಂತರ ತೆಗೆದಿದ್ದ ಭಾವಚಿತ್ರ ನಿ.ಪಿ.4 ರಿಂದ 6 ರಂತೆ ಇರುತ್ತವೆ. ಚಾಸಾ.3 ಮತ್ತು ನಾನು ಎಸ್ ಸಿ ಜಾತಿಯವರಿದ್ದು, 3 ಜನ ಆರೋಪಿತರು ಸಾಮಾನ್ಯ ಜನಾಂಗದವರಾಗಿರುತ್ತಾರೆ.

<u>ಪಾಟೀ ಸವಾಲುಃ ಶ್ರೀ ಬಿ.ಸಿ.ವಿ., ವಕೀಲರಿಂದ ಆರೋಪಿಗಳ ಪರವಾಗಿಃ</u>

ನಾನು ಮೂಲವಾಗಿ ಆನೇಕಲ್‌ನ ಅತ್ತಿಬೆಲೆ ವಾಸಿ. ನನ್ನ ಪತಿ ಚಾಸಾ.1 ಚರ್ಚ್ ನಲ್ಲಿ ಸಭಾಬೋದಕರು ಇರುತ್ತಾರೆ. ಚರ್ಚ್ ನಲ್ಲಿ ಬರುವ ಆದಾಯದಿಂದಲೇ ನಾವು ಜೀವನ ಮಾಡುತ್ತೇವೆ.

2. ಆರೋಪಿಗಳ ಜೊತೆ ಇದ್ದ ಇತರೆ ವ್ಯಕ್ತಿಗಳ ಹೆಸರು ನನಗೆ ಗೊತ್ತಿಲ್ಲ. ಪ್ರಶ್ನಿತ ಘಟನೆಯ ಮುನ್ನ 2ನೇ ಆರೋಪಿ ಬಿಟ್ಟು ನಾನು ಬೇರೆ ಯಾರನ್ನೂ ನೋಡಿರಲಿಲ್ಲ. ಘಟನೆಗೆ ಮುನ್ನ ನಾವು ಮತ್ತು ಆರೋಪಿಗಳು ಎಂದೂ ಭೇಟಿ ಮಾಡಿಲ್ಲ ಎನ್ನುವುದು ಸರಿ. ಆರೋಪಿಗಳು ಯಾರು ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಚಾಸಾ.3 ಸಹ ನಾನು ವಾಸವಿರುವ ಆನಂದಪುರದಲ್ಲಿಯೇ ನಿವಾಸಿಯಾಗಿರುತ್ತಾರೆ ಎನ್ನುವುದು ಸರಿ. ಚಾಸಾ.3 ನಮ್ಮ ಚರ್ಚ್ ಗೆ ನಿಯಮಿತವಾಗಿ ಬಂದು ಹೋಗುತ್ತಾರೆ ಎನ್ನುವುದು ಸರಿ.

3. ನಾನು ಘಟನೆಯ ಸಮಯದಲ್ಲಿ ಮೊಬೈಲ್ ಬಳಕೆ ಮಾಡುತ್ತಿದ್ದೆ ಎನ್ನುವುದು ಸರಿ. ಆ ಸಮಯದಲ್ಲಿ ನಾನು ಮೊಬೈಲ್‌ನಲ್ಲಿ ಫೋಟೋ ತೆಗೆಯಲಿಲ್ಲ. ಘಟನೆಯ ದಿನದಂದು ಆರೋಪಿಗಳ ವಿರುದ್ಧ ದೂರು ನೀಡಲು ಯತ್ನಿಸಲಿಲ್ಲ. ನಮ್ಮ ಮನೆಯಿಂದ ಚನ್ನಪಟ್ಟಣ ಡಿವೈಎಸ್‌ಪಿ ಕಚೇರಿ 1 ಕಿಮೀ ಅಂತರದಲ್ಲಿದೆ. ನಮ್ಮಲ್ಲಿ ಯಾರೂ ಸದರಿ ಕಚೇರಿಗೆ ಹೋಗಿ ದೂರು ನೀಡಲು ಯತ್ನಿಸಲಿಲ್ಲ. ಮಾರನೇ ದಿನವೂ ಬೆಳಿಗ್ಗೆ ದೂರು ನೀಡಲು ಯೋಚಿಸಲಿಲ್ಲ.

4. ನಮ್ಮ ಜಮೀನಿನ ಚಕ್ಕುಬಂದಿ ಹೇಳಲು ನನಗೆ ಬರುವುದಿಲ್ಲ. ನಮ್ಮ ಜಮೀನಿನ ಪಕ್ಕದಲ್ಲಿ ಶಾಲೆ, ಆಸ್ಪತ್ರೆ, ದೇವಸ್ಥಾನಗಳು ಇವೆ

ಎನ್ನುವುದು ಸರಿ. ದಿಃ23..02.2020 ರಂದು ಸಂಜೆ ನಮ್ಮ ಜಮೀನಿನ ಬಳಿ ನಾನು ಮತ್ತು ಎಲ್ಲಾ ಸಾಕ್ಷಿದಾರರು ಸೇರಿ, ಮದ್ಯಪಾನ ಮಾಡಿ, ಕುಣಿತ ಮಾಡುವುದು ಮಾಡುತ್ತಿದೆವು ಎನ್ನುವುದು ಸರಿಯಲ್ಲ. ಆ ಸಮಯದಲ್ಲಿ ಊರಿನ ಗ್ರಾಮಸ್ಥರು ಬಂದು ಆ ರೀತಿ ಮಾಡಬಾರದು, ಪರಿಸರ ಕೆಡಿಸಬೇಡಿ ಎಂದು ಹೇಳಿದ್ದರು ಎನ್ನುವುದು ಸರಿಯಲ್ಲ. ಆಗ ನಾವು ಅವರಿಗೆ ಅವಾಚ್ಯ ಶಬ್ದದಿಂದ ಬೈದು, ನಿಂದನೆ ಮಾಡಿ ಕಳಿಸಿದ್ದೆವು ಎನ್ನುವುದು ಸರಿಯಲ್ಲ. ಈ ವಿಚಾರವನ್ನು ಗ್ರಾಮ ಪಂಚಾಯ್ತಿ ಸದಸ್ಯನಾಗಿದ್ದ 1 ನೇ ಆರೋಪಿಗೆ ತಿಳಿಸಿದ್ದು ಅವರು ಬಂದು ಈ ರೀತಿ ಮಾಡಬೇಡಿ ಎಂದು ನಮಗೆ ಬುದ್ದಿ ಹೇಳಿದ್ದರು ಎನ್ನುವುದು ಸರಿಯಲ್ಲ. ಆಗ ನಾವು 1 ನೇ ಆರೋಪಿಗೆ ಬೈದು ಹಲ್ಲೆ ಮಾಡಲು ಯತ್ನಿಸಿದೆವು ಎನ್ನುವುದು ಸರಿಯಲ್ಲ.

5. ನಾವುಗಳೇ ಜಮೀನಿನಲ್ಲಿ ಗುಂಡಿ ತೋಡಿ ಸುಮಾರು 100 ಕಲ್ಲುಗಳನ್ನು ನೆಟ್ಟಿದ್ದೆವು. ನನಗೆ ಚಿಕ್ಕ ವಯಸ್ಸಿನಿಂದ ಆ ಕೆಲಸ ಮಾಡಿರುವ ಅಭ್ಯಾಸ ಇದೆ.

6. ಯಾವುದೇ ರೀತಿಯ ಘಟನೆ 25 ನೇ ತಾರೀಖಿನಂದು ನಡೆಯದಿದ್ದರೂ ಮತ್ತು ಆರೋಪಿಗಳು ಯಾವುದೇ ದಿನದಂದು ಜಾತಿ ನಿಂದನೆ ಮಾಡಿ, ಹಲ್ಲೆ ಮಾಡದಿದ್ದರೂ ಸುಳ್ಳು ಹೇಳುತ್ತಿದ್ದೇನೆ

ಎನ್ನುವುದು ಸರಿಯಲ್ಲ. ನಾನು ಹೊಲೆಯ ಜಾತಿಗೆ ಸೇರಿದವಳಲ್ಲ ಎನ್ನುವುದು ಸರಿ. ಚಾಸಾ.4 ಕೋಡಂಬಳ್ಳಿ ಆಸ್ಪತ್ರೆಯಲ್ಲಿ ಹಲ್ಲೆ ಆಗಿದ್ದಕ್ಕೆ ಚಿಕಿತ್ಸೆ ಪಡೆದಿರುತ್ತಾರೆ. ಯಾವುದೇ ಚಿಕಿತ್ಸೆಯ ದಾಖಲೆಯನ್ನು ಪೊಲೀಸರಿಗೆ ನೀಡಿಲ್ಲ.

7. 27ನೇ ತಾರೀಖಿನಂದು ಸಂಜೆ 4.00 ಗಂಟೆಗೆ ಪೊಲೀಸರು ಬಂದಾಗ ಸ್ಥಳಕ್ಕೆ ನಾನು, ಚಾಸಾ.1, ಚಾಸಾ.9 ಮತ್ತು 10 ಇದ್ದೆವು. ನಾನು ಮಹಜರ್ ದಿನದಂದು ಪೊಲೀಸರಿಗೆ ಘಟನೆಯ ಬಗ್ಗೆ ತಿಳಿಸಿರುತ್ತೇನೆ. ಆಗಲೇ ನನ್ನ ಹೇಳಿಕೆಯನ್ನು ಬರೆದುಕೊಂಡಿರುತ್ತಾರೆ. ನಂತರ ನನ್ನನ್ನು ದಿಃ01.04.2020ರಂದು ಹೇಳಿಕೆಗಾಗಿ ಚನ್ನಪಟ್ಟಣ ಪುರ ಪೊಲೀಸ್ ಠಾಣೆಗೆ ಕರೆದಿದ್ದರು. ಆಗಲೂ ನನ್ನನ್ನು ವಿಚಾರಿಸಿ ಹೇಳಿಕೆ ಪಡೆದಿರುತ್ತಾರೆ. ನಂತರ ಯಾವುದೇ ದಿನದಂದು ಪೊಲೀಸರು ನನ್ನ ಹೇಳಿಕೆ ಪಡೆದಿರುವುದಿಲ್ಲ. ನಾನು 27ನೇ ತಾರೀಖಿನಲ್ಲಾಗಲೀ, ದಿಃ01.04.2020ರಂದಾಗಲೀ ಚಾಸಾ.3ರವರ ಮೇಲೆ 1ನೇ ಆರೋಪಿ ಎಳೆದಾಡಿ ತಳ್ಳಿದರು ಎಂದು ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಎನ್ನುವುದು ಸರಿಯಲ್ಲ. ನಾನು ಮಧ್ಯ ಹೋದಾಗ ನನ್ನನ್ನು 2ನೇ ಆರೋಪಿ ತಳ್ಳಿದರು ಮತ್ತು ನಿಂದಿಸಿದರು ಎಂದು ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಎನ್ನುವುದು ಸರಿಯಲ್ಲ. ಆರೋಪಿಗಳು ಯಾವುದೇ ಬಾರ್,

ಕ್ಲಬ್ ಮಾಡಿ, ಬೇರೆ ಯಾವುದೇ ಕೆಲಸ ಮಾಡಲು ಬಿಡುವುದಿಲ್ಲ ಎಂದು ಬೆದರಿಸಿದ್ದರು ಎಂದು ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಎನ್ನುವುದು ಸರಿಯಲ್ಲ. ಆರೋಪಿಗಳು ಘಟನೆಯ ಸಮಯದಲ್ಲಿ ಮದ್ಯಪಾನ ಮಾಡಿದ್ದರು ಎಂದು ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಎನ್ನುವುದು ಸರಿ.

8. ಆರೋಪಿತರೇ ಕಲ್ಲುಗಳನ್ನು ಒಡೆದು ಹಾಕಿದ್ದನ್ನು ನಾನು ನೋಡಿಲ್ಲ ಎನ್ನುವುದು ಸರಿ. ನಾನು, ಚಾಸಾ.1 ಸೇರಿ ಹಿಂದೂಗಳನ್ನು ಕ್ರಿಶ್ಚಿಯನ್ ಧರ್ಮಕ್ಕೆ ಸೇರಲು ಒತ್ತಾಯ ಮಾಡುತ್ತಿದ್ದೆವು ಎನ್ನುವುದು ಸರಿಯಲ್ಲ. ನಾವು ಖರೀದಿಸಿದ್ದ ಜಮೀನಿನಲ್ಲಿ ಪರಿವರ್ತನಾ ಕೇಂದ್ರವನ್ನು ಕಟ್ಟಬೇಕೆಂದಿದ್ದೆವು ಎಂದರೆ ಮುಂದೆ ನಾವು ಕಾನೂನುಬದ್ದವಾಗಿ ಮಾಡಬೇಕೆಂದಿದ್ದೆವು ಎಂದು ಸಾಕ್ಷಿ ನುಡಿಯುತ್ತಾರೆ. ಈ ಕಾರಣದಿಂದ 1 ನೇ ಆರೋಪಿ ಗ್ರಾಮ ಪಂಚಾಯ್ತಿ ಸದಸ್ಯನಿದ್ದು ಗ್ರಾಮಸ್ಥರ ನೇತೃತ್ವದಲ್ಲಿ ಪ್ರತಿಭಟನೆ ಮಾಡುತ್ತಿದ್ದರು ಎನ್ನುವುದು ಸರಿಯಲ್ಲ. ಆ ಕಾರಣದಿಂದ ಆರೋಪಿನಮ್ಮ ಕೆಲಸಕ್ಕೆ ಅಡ್ಡಿಪಡಿಸುತ್ತಾನೆಂಬ ಉದ್ದೇಶದಿಂದ ಆರೋಪಿಗಳ ವಿರುದ್ದ ಸುಳ್ಳು ದೂರು ನೀಡಿದ್ದೇವೆ ಎನ್ನುವುದು ಸರಿಯಲ್ಲ. ಂ ಯಾವುದೇ ಘಟನೆ ನಡೆಯದಿದ್ದರೂ ಚಾಸಾ.1ರವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ. ಆರೋಪಿಗಳು ನನಗೆ, ಚಾಸಾ.1, 3 ಮತ್ತು 4ರವರಿಗೆ ಅವಾಚ್ಯ

ಶಬ್ದಗಳಿಂದ ಜಾತಿ ಹಿಡಿದು ನಿಂದಿಸಿ ಹಲ್ಲೆ ಮಾಡಿರುತ್ತಾರೆಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಾನು ನನ್ನ ಪತಿ ಚಾಸಾ.1 ರವರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಮರುಳಸಿದ್ಧಾರಾಧ್ಯ ಹೆಚ್.ಜೆ)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.